## ದಿನಾಂಕ: 24.5.2013ರಂದು ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

**ವಿಷಯ 1 : 4 (1)(ಎ) 4 (1)(ಬಿ) ಮಾಹಿತಿ :**

ಮೊದಲಿಗೆ 25.4.2013ರಂದು ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾಣಗಳನ್ವಯ ಕೈಗೊಂಡ ಕ್ರಮಗಳ ಬಗ್ಗೆ ಮುಖ್ಯ ಆಯುಕ್ತರು ಕಾರ್ಯದರ್ಶಿಗಳಿಂದ ವಿವರಣೆ ಕೇಳಲಾಗಿ, ಕಾರ್ಯದರ್ಶಿಗಳು ಮಾಹಿತಿ ಹಕ್ಕು ಕಾಯ್ದೆಯ ವಿಧಿ 4(1)(ಎ) ಮತ್ತು 4(1)(ಬಿ) ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಜನಸ್ಪಂದನ ಮತ್ತು ಎನ್.ಐ.ಸಿ.ಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿದ್ದು, ಇಲಾಖಾವಾರು ಮಾಹಿತಿಯನ್ನು ಕ್ರೋಢೀಕರಿಸಿ ಅದನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡುತ್ತಾ ಸಂಪೂರ್ಣ ವಿವರವನ್ನು ಜನಸ್ಪಂದನ ವೆಬ್‌ಸೈಟ್‌ಗೆ ಲಿಂಕ್ ಮಾಡಲಾಗುತ್ತಿದ್ದು, ಎಲ್ಲಾ ಇಲಾಖೆಗಳ ಮಾಹಿತಿಯು ಅಪ್‌ಗ್ರೇಡ್ ಮಾಡಿದ ನಂತರ ಜನಸ್ಪಂದನ ವೆಬ್‌ಸೈಟ್‌ಗೆ ಲಿಂಕ್ ಮಾಡಲಾಗುವುದಾಗಿ ಸಭೆಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾಹಿತಿ ಆಯುಕ್ತರಾದ ಶ್ರೀ.ಡಿ.ತಂಗರಾಜ್ ರವರು ಎಲ್ಲಾ ಇಲಾಖೆಗಳಿಂದಲೂ ಮಾಹಿತಿಯನ್ನು ಕ್ರೋಢೀಕರಿಸಿ ಅಪ್‌ಲೋಡ್ ಮಾಡುವುದಕ್ಕೆ ಸಮಯಾವಕಾಶ ಹೆಚ್ಚಾಗುವ ಸಾಧ್ಯತೆಗಳಿದ್ದು ಉದಾಹರಣೆಗೆ 10 ಇಲಾಖೆಗಳು ಮಾಹಿತಿಯನ್ನು ಅಪ್‌ಲೋಡ್ ಮಾಡಿದ್ದು, ಉಳಿದ ಇಲಾಖೆಗಳು ಮಾಹಿತಿ ನೀಡುವಲ್ಲಿ ವಿಳಂಬವಾದರೆ ಆವರೆವಿಗೂ ಜನಸ್ಪಂದನ ವೆಬ್‌ಸೈಟ್‌ಗೆ ಲಿಂಕ್ ಮಾಡಲಾಗುವುದಿಲ್ಲ. ಇದರಿಂದ ಹೆಚ್ಚು ವಿಳಂಬವಾಗುತ್ತದೆ ಎಂಬ ಅಭಿಪ್ರಾಯ ತಿಳಿಸಿದರು.

ಇದಕ್ಕೆ ಸ್ಪಂದಿಸಿದ ಮಾಹಿತಿ ಆಯುಕ್ತರಾದ ಶ್ರೀ.ಜೆ.ಎಸ್.ವಿರೂಪಾಕ್ಷಯ್ಯರವರು ಯಾವ ಯಾವ ಇಲಾಖೆಗಳ ಮಾಹಿತಿ ಲಭ್ಯವಿರುತ್ತದೆಯೋ ಆ ಮಾಹಿತಿಯನ್ನು ಜನಸ್ಪಂದನ ವೆಬ್‌ಸೈಟ್‌ಗೆ ಲಿಂಕ್ ಮಾಡುವುದು ಸೂಕ್ತವೆಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾಹಿತಿ ಆಯುಕ್ತರಾದ ಶ್ರೀ.ಡಿ.ತಂಗರಾಜ್ ರವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವ್ಯಾಪ್ತಿಯ ಎಂಟು ಇಲಾಖೆಗಳಲ್ಲಿ ಈಗಾಗಲೇ 4 (1)(ಎ) ಮತ್ತು 4 (1)(ಬಿ) ಮಾಹಿತಿಯನ್ನು ಅವರ ವೆಬ್‌ಸೈಟ್‌ನಲ್ಲಿ ಪ್ರಕಟಪಡಿಸಿದ್ದು ಆ ಮಾಹಿತಿಯನ್ನು ಜನಸ್ಪಂದನ ವೆಬ್‌ಸೈಟ್‌ಗೆ ಲಿಂಕ್ ಮಾಡಬಹುದಾಗಿ ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಮಾಹಿತಿ ಆಯುಕ್ತರು ಯಾವ ಇಲಾಖೆಯಿಂದ ಮಾಹಿತಿ ಅಪ್‌ಡೇಟ್ ಆಗಿ ಲಭ್ಯವಿರುತ್ತದೆಯೋ ಸದರಿ ಮಾಹಿತಿಯನ್ನು ಕೂಡಲೇ ಜನಸ್ಪಂದನ ಇಲಾಖೆಯ ವೆಬ್‌ಸೈಟ್‌ಗೆ ಲಿಂಕ್ ಮಾಡಿಸಿ ಮಾಹಿತಿಯು ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ಸೂಕ್ತವಾದದ್ದು ಎಂದು ಅಭಿಪ್ರಾಯಪಟ್ಟರು.

**ನಿರ್ಣಯ: ಇಲಾಖೆಗಳಲ್ಲಿ ಈಗಾಗಲೇ ಲಭ್ಯವಿರುವ ಮಾಹಿತಿ ಹಕ್ಕು ಕಾಯ್ದೆಯ ವಿಧಿ 4(1)(ಎ) ಮತ್ತು 4(1)(ಬಿ) ಮಾಹಿತಿಯನ್ನು ಜನಸ್ಪಂದನ ಇಲಾಖೆಯ ವೆಬ್‌ಸೈಟ್‌ಗೆ ಲಿಂಕ್ ಮಾಡುವುದು. ಹಾಗೂ ಎಲ್ಲಾ ಇಲಾಖೆಗಳ 4 (1)(ಎ) ಮತ್ತು 4 (1)(ಬಿ) ಮಾಹಿತಿಯನ್ನು ಜರೂರಾಗಿ ಪ್ರಕಟಿಸುವಂತೆ ತಿಳಿಸಿ ಸದರಿ ಮಾಹಿತಿಯನ್ನು ಜನಸ್ಪಂದನ ವೆಬ್‌ಸೈಟ್‌ನಲ್ಲಿ ಲಿಂಕ್ ನೀಡುವುದರ ಮೂಲಕ ಪ್ರಕಟಪಡಿಸುವುದು.**

**ವಿಷಯ 2 : ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ವೇತನ ಹೆಚ್ಚಳ :**

ಹೊರಗುತ್ತಿಗೆ ನೌಕರರ ವೇತನಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮದ ಬಗ್ಗೆ ಮುಖ್ಯ ಮಾಹಿತಿ ಆಯುಕ್ತರು ಕಾರ್ಯದರ್ಶಿಗಳನ್ನು ವಿವರಣೆ ಕೇಳಲಾಗಿ, ಇದಕ್ಕೆ ಉತ್ತರಿಸಿದ ಕಾರ್ಯದರ್ಶಿಗಳು ಪ್ರಸ್ತಾವನೆ ಸಿದ್ಧಗೊಂಡು ಕಡತವನ್ನು ಸಿಬ್ಬಂದಿ ಮತ್ತು ಆಡಳಿತ ಇಲಾಖೆಗೆ ಸಲ್ಲಿಸಲಾಗಿದ್ದು, ಸಿಬ್ಬಂದಿಯ ಸಂಖ್ಯೆ ಮತ್ತು ವಿವರಗಳ ಕುರಿತು ಕೆಲವೊಂದು ಸಮಜಾಯಿಷಿಯನ್ನು ಕೇಳಿದ್ದು ಆ ಮಾಹಿತಿಯನ್ನೂ ಸಹ ಈಗಾಗಲೇ ನೀಡಲಾಗಿದ್ದು, ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಕಡತವನ್ನು ಸಲ್ಲಿಸಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ನಿರ್ಣಯ: ಸರ್ಕಾರದ ಅನುಮೋದನೆ ನಂತರ ಹೊಸ ಟೆಂಡರ್ ಕರೆಯಲು ಸಮಯ ಬೇಕಾಗಿರುವ ಕಾರಣ, ಹಾಲಿ ಇರುವ 2 ಜನ ಹೊರ ಗುತ್ತಿಗೆದಾರರ ಅವಧಿಯನ್ನು 2ತಿಂಗಳ ಕಾಲ ಅಥವಾ ಹೊಸ ಟೆಂಡರ್ ಅನುಮೋದನೆಯಾಗುವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲು ತೀರ್ಮಾನಿಸಲಾಯಿತು.

ಹಿಂದಿನ ಸಭೆಯಲ್ಲಿ ಮುಖ್ಯ ಮಾಹಿತಿ ಆಯುಕ್ತರು ಸೂಚಿಸಿದನ್ವಯ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುವುದಾಗಿ ಕಾರ್ಯದರ್ಶಿಗಳು ಸಭೆಗೆ ಮಾಹಿತಿ ನೀಡಿದರು :

- ಆಯೋಗದ ಅಕೌಂಟ್ಸ್ ವಿಭಾಗದಲ್ಲಿನ ಮಂಜಪ್ಪಗೌಡರವರನ್ನು ಆಡಳಿತ ವಿಭಾಗದಲ್ಲಿರುವ ಯೋಗೀಶ್‌ರವರ ಸ್ಥಳಕ್ಕೆ ಪರಸ್ಪರ ನಿಯೋಜಿಸಿ, ಕಾರ್ಯಕ್ಷೇತ್ರ ಬದಲಾವಣೆ ಮಾಡಲಾಗಿರುವುದು.
- ಆಯೋಗದಲ್ಲಿ ಬಿ.ಎಂ.ಟಿ.ಸಿ.ಯಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಚಾಲಕರಿಗೆ ಲಭ್ಯವಾಗಬೇಕಿದ್ದ ಭತ್ಯೆ ಬಾಕಿ ಮೊತ್ತವನ್ನು ಈಗಾಗಲೇ ಬಿಲ್ ಸಿದ್ಧಪಡಿಸಿ, ರಾಜ್ಯ ಖಜಾನೆ ಇಲಾಖೆಗೆ ಸಲ್ಲಿಸಿದ್ದು, ಪಾವತಿಯ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿರುವುದು.

ವಿಷಯ 3 : ಮೂರು ವರ್ಷಗಳ ಅವಧಿ ಮೀರಿದ ಕಡತಗಳ ನಾಶಪಡಿಸುವಿಕೆ ಹಾಗೂ ಎಂ.ಎಸ್.ಬಿಲ್ಡಿಂಗ್‌ನಲ್ಲಿ ಹೆಚ್ಚಿನ ಸ್ಥಳಾವಕಾಶಕ್ಕಾಗಿ ಪ್ರಯತ್ನಿಸುವುದರ ಬಗ್ಗೆ:

ಮೂರು ವರ್ಷಗಳಿಗೂ ಮೀರಿದ ಕಡತಗಳ ನಾಶಪಡಿಸುವಿಕೆಯ ಬಗ್ಗೆ ಮಾಹಿತಿ ನೀಡಿದ ಕಾರ್ಯದರ್ಶಿಗಳು, ಈಗಾಗಲೇ ಕಿಯೋನಿಕ್ಸ್ ಸಂಸ್ಥೆಯಿಂದ ಡೆಟಾ ಎಂಟ್ರಿ ಆಪರೇಟರ್‌ಗಳನ್ನು ನಿಯೋಜಿಸಲಾಗಿದ್ದು, ಮಿಥಿಕ್ ಸೊಸೈಟಿಯಲ್ಲಿ ಕಾರ್ಯ ಪ್ರಗತಿಯಲ್ಲಿರುವುದಾಗಿ ತಿಳಿಸಿದರು. ನಂತರ ಮಾತನಾಡುತ್ತಾ, ಮೊದಲು ವಿಲೇ ಆದ ಕಡತಗಳನ್ನು ದಾಖಲಿಸಿ ಅಪ್‌ಲೋಡ್ ಮಾಡಲಾಗುತ್ತಿದ್ದು ಅದರಲ್ಲಿ ಕಡತ ಪ್ರಾರಂಭದ ದಿನಾಂಕ, ವಿಲೇ ದಿನಾಂಕ, ವರ್ಗ, ದಂಡ, ಪರಿಹಾರ ರೀತ್ಯ ವಿಭಾಗಗಳಂತೆ ಡೆಟಾ ಎಂಟ್ರಿ ಮಾಡಲಾಗುತ್ತಿದ್ದು ಇದಕ್ಕಾಗಿ ಮೂರು ಜನ ಸಿಬ್ಬಂದಿ ವರ್ಗದವರನ್ನು ನೇಮಿಸಲಾಗಿದ್ದು, ಅವರುಗಳು ಎಲ್ಲಾ ಮಾಹಿತಿಯನ್ನು ವಿಭಾಗಾವಾರು ಕಡತದಲ್ಲಿ ನಮೂದಿಸಿ ನೀಡುತ್ತಿದ್ದಾರೆ ಮತ್ತು ಸದರಿ ಮಾಹಿತಿಯನ್ನು ಕಿಯೋನಿಕ್ಸ್ ಸಂಸ್ಥೆಯಿಂದ ನಿಯೋಜಿತಗೊಂಡಿರುವ ಡೆಟಾ ಎಂಟ್ರಿ ಆಪರೇಟರ್‌ಗಳು ಗಣಕಯಂತ್ರದಲ್ಲಿ ದಾಖಲಿಸಿ ಅಪ್‌ಲೋಡ್ ಮಾಡುತ್ತಿದ್ದಾರೆಂದು ಸಭೆಗೆ ತಿಳಿಸಿದರು. ನಂತರ, ಈ ಹಂತದಲ್ಲಿ 'ಆರ್ಡರ್ ಕಾಪಿಗಳನ್ನು ಸ್ಕ್ಯಾನ್ ಮಾಡಿ ಡಿಜಿಟೈಜ್ ಮಾಡಬೇಕೆನ್ನುವ ಬಗ್ಗೆ ಸೂಚನೆ ನೀಡುವಂತೆ ಸಭೆಯನ್ನು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾಹಿತಿ ಆಯುಕ್ತರಾದ ಶ್ರೀ.ಜೆ.ಎಸ್.ವಿರೂಪಾಕ್ಷಯ್ಯರವರು ಈ ಹಿಂದೆ ಅಂತಿಮ ಆದೇಶದ ಪ್ರಿಂಟ್‌ಔಟ್ ತೆಗೆದು ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿತ್ತು ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಮಾಹಿತಿ ಆಯುಕ್ತರು ಗಣಕಯಂತ್ರದಲ್ಲಿ ಸಂಪೂರ್ಣ ಮಾಹಿತಿ ಅಪ್‌ಲೋಡ್ ಆಗಿರುವುದರಿಂದ ಮತ್ತೆ ಸ್ಕ್ಯಾನ್ ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಿದರು.

ಇದಕ್ಕೆ ಸ್ಪಂದಿಸಿದ ಮಾಹಿತಿ ಆಯುಕ್ತರಾದ ಶ್ರೀ.ಡಿ.ತಂಗರಾಜ್‌ರವರು ಕೆಲವೊಂದು ಪ್ರಕರಣಗಳಲ್ಲಿ ಕೊನೆಯ ಹಿಯರಿಂಗ್ ಅಂತಿಮ ಆರ್ಡರ್ ಆಗಿರುವುದಿಲ್ಲ; ಅಂತಹ ಸಂದರ್ಭದಲ್ಲಿ (1) ದಂಡ ವಿಧಿಸಿದ ದಿನಾಂಕ (2) ದಂಡ ಪಾವತಿಯಾದ ದಿನಾಂಕ ಮತ್ತು (3) ದಂಡ ವಿಧಿಸಿದ್ದನ್ನು ಹಿಂಪಡೆದಿದ್ದಲ್ಲಿ ಸದರಿ ಆದೇಶದ ದಿನಾಂಕ ಮತ್ತು ಪಾವತಿಸಿದ ಚಲನ್ ಸಂಖ್ಯೆ ನಮೂದಿಸಿ ಅಪ್‌ಲೋಡ್ ಮಾಡಬೇಕೆಂದು ತಿಳಿಸಿದರು.

ನಂತರ ಮಾತನಾಡಿದ, ಮಾಹಿತಿ ಆಯುಕ್ತರಾದ ಶ್ರೀ.ಜೆ.ಎಸ್.ವಿರೂಪಾಕ್ಷಯ್ಯರವರು ಈ ಕೂಡಲೇ ಎಂ.ಎಸ್.ಬಿಲ್ಡಿಂಗ್‌ನಲ್ಲಿ ಖಾಲಿಯಿರುವ ಕೊಠಡಿಗಳಲ್ಲಿ ಕಡತಗಳನ್ನು ಸಂಗ್ರಹಿಸಿಕೊಳ್ಳುವ ಸಲುವಾಗಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಿಗೆ ಮುಖ್ಯ ಆಯುಕ್ತರ

ಮೂಲಕ ಪತ್ರ ಬರೆದು ಕೂಡಲೇ ಕೊಠಡಿಗಳನ್ನು ಆಯೋಗದ ವಶಕ್ಕೆ ಪಡೆಯಬೇಕೆಂದು ಕಾರ್ಯದರ್ಶಿಗಳಿಗೆ ಸೂಚನೆ ನೀಡಿದರು.

**ನಿರ್ಣಯ :**

- **ಪ್ರಕರಣಗಳಲ್ಲಿ ನೀಡಲಾಗಿರುವ ಅಂತಿಮ ತೀರ್ಪು, ದಂಡ ಪಾವತಿಗೆ ಸಂಬಂಧಿಸಿದಂತೆ ಪಾವತಿಯ ಚಲನ್ ಸಂಖ್ಯೆ, ದಿನಾಂಕ, ದಂಡ ವಿಧಿಸಿದ್ದನ್ನು ಹಿಂಪಡೆದಿರುವ ಮಾಹಿತಿ, ಕಡತದ ಪ್ರಾರಂಭ ದಿನಾಂಕ, ವಿಲೇ ದಿನಾಂಕ, ವರ್ಗ, ಪರಿಹಾರ ರೀತ್ಯ ವರ್ಗವಾರು ಸಂಪೂರ್ಣ ಮಾಹಿತಿಯನ್ನು ದಾಖಲಿಸಿ ತದನಂತರ ಕಡತಗಳನ್ನು ನಾಶಪಡಿಸುವ ಕ್ರಮ ಕೈಗೊಳ್ಳುವುದು.**
- **ಕಡತಗಳನ್ನು ಸಂಗ್ರಹಿಸಿಡಲು ಎಂ.ಎಸ್.ಬಿಲ್ಡಿಂಗ್‌ನಲ್ಲಿ ಖಾಲಿಯಿರುವ ಕೊಠಡಿಗಳನ್ನು ಆಯೋಗಕ್ಕೆ ಪಡೆಯುವ ಸಲುವಾಗಿ ಮುಖ್ಯ ಮಾಹಿತಿ ಆಯುಕ್ತರಿಂದ ಮುಖ್ಯ ಕಾರ್ಯದರ್ಶಿಗಳು / ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆಯುವುದು ಮತ್ತು ತ್ವರಿತವಾಗಿ ಖಾಲಿಯಿರುವ ಕೊಠಡಿಗಳನ್ನು ಆಯೋಗದ ವಶಕ್ಕೆ ಪಡೆಯಲು ಕ್ರಮವಹಿಸುವುದು.**

**ವಿಷಯ 4 : ವಾರ್ಷಿಕ ವರದಿ :**

ಆಯೋಗದಿಂದ ಸಿದ್ಧಪಡಿಸಲಾಗುವ 2012–13ನೇ ಸಾಲಿನ ವಾರ್ಷಿಕ ವರದಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಖ್ಯ ಆಯುಕ್ತರು ಕೇಳಲಾಗಿ, ಇದಕ್ಕೆ ಉತ್ತರಿಸಿದ ಶ್ರೀನಿವಾಸ್‌ರವರು ಈಗಾಗಲೇ ಕಾರ್ಯ ಪ್ರಗತಿಯಲ್ಲಿದ್ದು ಕರಡು ಪ್ರತಿಯ ತಯಾರಿಕೆಗೆ ಸಿದ್ಧವಾಗಿರುವ ಅಧ್ಯಾಯಗಳ ವಿವರಗಳ ಸಂಕ್ಷಿಪ್ತ ಮಾಹಿತಿಯನ್ನು ಸಭೆಗೆ ಒದಗಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾಹಿತಿ ಆಯುಕ್ತರಾದ ಶ್ರೀ.ಜೆ.ಎಸ್.ವಿರೂಪಾಕ್ಷಯ್ಯರವರು ವಾರ್ಷಿಕ ವರದಿಯಲ್ಲಿ ವಿವಿಧ ಇಲಾಖೆಗಳ ಮಾಹಿತಿಯನ್ನು ಕಾಯ್ದೆಯ ವಿಧಿ 19(1)ರಂತೆ ಸ್ವೀಕರಿಸಿರುವ First appeal ಬಾಕಿ / ವಿಲೇ ವಿವರಗಳನ್ನು ನಮೂದಿಸಲಾಗುತ್ತಿದೆಯೇ ಎಂದು ಕೇಳಲಾಗಿ, ಶ್ರೀ.ಶ್ರೀನಿವಾಸ್‌ರವರು ನಮೂದಿಸಲಾಗುತ್ತಿದೆ ಎಂದು ಉತ್ತರ ನೀಡಿದರು. ನಂತರ ಮಾತನಾಡಿದ ಮುಖ್ಯ ಮಾಹಿತಿ ಆಯುಕ್ತರು ಕಾಯ್ದೆಯಲ್ಲಿಯೇ 45 ದಿನಗಳ ಕಾಲಮಿತಿಯಲ್ಲಿ ಪ್ರಥಮ ಅಪಿಲ್ ಇತ್ಯರ್ಥಗೊಳಿಸಬೇಕಾಗಿದು; ಹಲವು ಪ್ರಕರಣಗಳಲ್ಲಿ ಆರು ತಿಂಗಳಿಗೂ ಹೆಚ್ಚುಕಾಲ ಪ್ರಕರಣವನ್ನು ಮುಂದೂಡಲಾಗುತ್ತಿದೆ ಹಾಗಾಗಿ First appeal ಬಾಕಿ / ವಿಲೇ ವಿವರಗಳನ್ನು ವಾರ್ಷಿಕ ವರದಿಯಲ್ಲಿ ನಮೂದಿಸುವಂತೆ ತಿಳಿಸಿದರು. ಇದಕ್ಕೆ ಸ್ಪಂದಿಸಿದ ಮಾಹಿತಿ ಆಯುಕ್ತರಾದ ಶ್ರೀ. ಡಿ.ತಂಗರಾಜ್ ರವರು ಇಲಾಖಾ ಮಟ್ಟದಲ್ಲಿ First appellate Authority ಬಗ್ಗೆ ವ್ಯಾಪಕ ಪ್ರಚಾರದ ಅಗತ್ಯವಿದ್ದು, ಈ ಬಗ್ಗೆ ಇಲಾಖಾ ಹಂತದಲ್ಲಿ ಸೂಕ್ತ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ಒದಗಿಸುವಂತೆ ಸೂಚನೆ ನೀಡಬೇಕೆಂದು ತಿಳಿಸಿದರು.

ನಂತರ ಮಾತನಾಡಿದ ಮುಖ್ಯ ಮಾಹಿತಿ ಆಯುಕ್ತರು, ಅಕೌಂಟ್ಸ್ ಮತ್ತು ಆಡಳಿತ ವಿಭಾಗದ ಮಾಹಿತಿಯು ಪೂರ್ಣವಾಗಿ ಪ್ರಕಟಿಸಿಲ್ಲವಾದ್ದರಿಂದ ಮಾಹಿತಿಯನ್ನು ಕ್ರೋಢಿಕರಿಸಿ cataloguing and indexing ಮಾಡಿ ಮಾಹಿತಿ ಆಯೋಗದ ಮಾಹಿತಿಯನ್ನು ಅಫ್‌ಡೇಟ್ ಮಾಡಬೇಕಾಗಿ ತಿಳಿಸಿದರು ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಅಪೀಲು ಅಧಿಕಾರಿಯ ವಿವರಗಳುಳ್ಳ ಸೂಚನಾ ಫಲಕವನ್ನು ಮಿಥಿಕ್ ಸೊಸೈಟಿಯಲ್ಲಿರುವ ಆಯೋಗದ ಕಛೇರಿಯ ಮುಂಭಾಗದಲ್ಲಿ ಸಹ ಪ್ರಕಟಪಡಿಸಬೇಕೆಂದು ಸೂಚಿಸಿದರು.

ಮುಂದುವರೆದು ಮುಖ್ಯ ಮಾಹಿತಿ ಆಯುಕ್ತರು, ಹಿಂದಿನ ಸಭೆಯಲ್ಲಿ ತಿಳಿಸಿದಂತೆ ವಾರ್ಷಿಕ ವರದಿಯನ್ನು ತಯಾರಿಸಲು ನಿಯೋಜಿಸಿರುವ ಅಸಿಸ್ಟೆಂಟ್ ಸ್ಟಾಟಿಸ್ಟಿಕಲ್ ಆಫೀಸರ್ ರವರಿಗೆ ಸೂಕ್ತ ಸಿಬ್ಬಂದಿ ಮತ್ತು ಸ್ಥಳಾವಕಾಶವನ್ನು ಕಲ್ಪಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕಾರ್ಯದರ್ಶಿಗಳಿಗೆ ಸೂಚಿಸಲಾಗಿ, ಇದಕ್ಕೆ ಸ್ಪಂದಿಸಿದ ಕಾರ್ಯದರ್ಶಿಗಳು ಈಗಾಗಲೇ ಅಸಿಸ್ಟೆಂಟ್ ಸ್ಟಾಟಿಸ್ಟಿಕಲ್ ಆಫೀಸರ್ ರವರಿಗೆ ಸಹಾಯಕರನ್ನು ನೀಡಲಾಗಿದ್ದು, ಆಯೋಗದ ಅಕೌಂಟ್ಸ್ ವಿಭಾಗದಲ್ಲಿ ಸೂಕ್ತ ಸ್ಥಳಾವಕಾಶ ಒದಗಿಲಾಗುವುದಾಗಿ ಸಭೆಗೆ ತಿಳಿಸಿದರು.

ನಿರ್ಣಯ : 2012–13ನೇ ಸಾಲಿನ ವಾರ್ಷಿಕ ವರದಿ ತಯಾರಿಸಲು ಅಗತ್ಯವಿರುವ ಮಾಹಿತಿಯನ್ನು ಕೂಡಲೇ ಕ್ರೋಢೀಕರಿಸುವುದು. ಅಸಿಸ್ಟೆಂಟ್ ಸ್ಟಾಟಿಸ್ಟಿಕಲ್ ಆಫೀಸರ್ ರವರು ನೀಡಿರುವ ಪ್ರಗತಿ ವರದಿಯಲ್ಲಿ ತಿಳಿಸುರುವಂತೆ ಪೂರ್ಣ ಸಿದ್ಧತೆಗೆ ಅವಶ್ಯವಿರುವ ಅಂಕಿ–ಅಂಶಗಳನ್ನು ಎಲ್ಲಾ ಇಲಾಖೆಗಳಿಂದ ಪಡೆದು ಸಂಪೂರ್ಣ ವಾರ್ಷಿಕ ವರದಿ ತಯಾರಿಸಲು ಕ್ರಮಕೈಗೊಳ್ಳುವುದು.

ಮಾಹಿತಿ ನೀಡದಿರುವ ಇಲಾಖೆಗಳ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ಆಯೋಗಕ್ಕೆ ಕರೆಯಿಸಿ ಪ್ರತಿನಿತ್ಯ ಇಬ್ಬಿಬ್ಬರಂತೆ ಮಾಹಿತಿ ಅಯುಕ್ತರಾದ ಶ್ರೀ.ಜೆ.ಎಸ್.ವಿರೂಪಾಕ್ಷಯ್ಯ ಹಾಗೂ ಶ್ರೀ.ಡಿ.ತಂಗರಾಜ್‌ರವರುಗಳೊಂದಿಗೆ ಸಮಾಲೋಚಿಸುವಂತೆ ಕ್ರಮ ವಹಿಸುವುದು.

(ಕ್ರಮ : ಎ.ಎಸ್.ಓ., ಅಧೀನ ಕಾರ್ಯದರ್ಶಿ, ಶ್ರೀ ಕರಿಸಿದ್ಧಪ್ಪ, ಶ್ರೀ ಮಂಜಪ್ಪ ಗೌಡ ರವರು)

**ವಿಷಯ 5 : ಆಯೋಗದ ನೂತನ ಕಟ್ಟಡ :**

ಆಯೋಗದ ನೂತನ ಕಟ್ಟಡದ ಪ್ರಗತಿ ಕಾರ್ಯದ ಬಗ್ಗೆ ಮುಖ್ಯ ಮಾಹಿತಿ ಆಯುಕ್ತರು ಕೇಳಲಾಗಿ, ಇದಕ್ಕೆ ಉತ್ತರಿಸಿದ ಕಾರ್ಯದರ್ಶಿಗಳು ಹಿಂದಿನ ಸಭೆಯಲ್ಲಿ ತಿಳಿಸಿದಂತೆ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸಭೆ ನಡೆಸಿ ಪ್ರಗತಿಯ ಬಗ್ಗೆ ಮಾಹಿತಿ ನೀಡುವುದಾಗಿ ತಿಳಿಸಿದ್ದು, ಈವರೆವಿಗೂ ಮಾಹಿತಿ ನೀಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾಹಿತಿ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಆಯೋಗದ ಕಾರ್ಯದರ್ಶಿಗಳು ಈ ಬಗ್ಗೆ ಹಿಂಬಾಲಿಕ ಕ್ರಮ ವಹಿಸಿ ಪ್ರಗತಿಯನ್ನು ಖುದ್ದು ವೀಕ್ಷಿಸುವಂತೆ ತಿಳಿಸಿದರು. ಇದಕ್ಕೆ ಸ್ಪಂದಿಸಿದ ಮುಖ್ಯ ಮಾಹಿತಿ ಆಯುಕ್ತರು ಕಟ್ಟಡದ ಪ್ರಗತಿ ಕಾರ್ಯದ ಬಗ್ಗೆ ಕಾರ್ಯದರ್ಶಿಗಳು ಸ್ಥಳಕ್ಕೆ ಭೇಟಿ ನೀಡಿ ಖುದ್ದು ಪರಿಶೀಲಿಸುವಂತೆ ಸೂಚಿಸಿದರು ಮತ್ತು ಪ್ರಧಾನ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆ ಇವರಿಗೆ ನಿರ್ಮಾಣದ ಪ್ರಗತಿಯ ವಿಳಂಬವಾಗುತ್ತಿರುವ ಬಗ್ಗೆ ತಿಳಿಸುವಂತೆ ಹೇಳಿದರು.

**ವಿಷಯ 6 : ಕಾನೂನು ಅಧಿಕಾರಿಗಳ ಮರುನೇಮಕ :**

ಈ ಬಗ್ಗೆ ಮಾಹಿತಿ ನೀಡಿದ ಕಾರ್ಯದರ್ಶಿಗಳು, ಈಗಾಗಲೇ ಪ್ರಸ್ತಾವನೆಯು ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾಹಿತಿ ಆಯುಕ್ತರಾದ ಶ್ರೀ.ಜೆ.ಎಸ್.ವಿರೂಪಾಕ್ಷಯ್ಯರವರು ಪ್ರಸ್ತಾವನೆಯು ಸಂಪುಟ ಸಭೆಯಲ್ಲಿ ಅನುಮೋದನೆಗೊಳ್ಳಬೇಕಾಗಿದ್ದು ಈ ಬಗ್ಗೆ ಹಿಂಬಾಲಿಕ ಕ್ರಮ ವಹಿಸುವಂತೆ ಕಾರ್ಯದರ್ಶಿಗಳಿಗೆ ತಿಳಿಸಿದರು. ಇದಕ್ಕೆ ಸಹಮತ ವ್ಯಕ್ತಪಡಿಸಿದ ಮುಖ್ಯ ಮಾಹಿತಿ ಆಯುಕ್ತರು ಈ ಬಗ್ಗೆ ತ್ವರಿತ ಕ್ರಮ ವಹಿಸುವಂತೆ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಸಂಪುಟ ಸಭೆಯಲ್ಲಿ ವಿಷಯ ಮಂಡಿಸುವ ಹಂತದಲ್ಲಿ ಮುಖ್ಯ ಕಾರ್ಯದರ್ಶಿಗಳೊಡನೆ ತಾವು ಮಾತನಾಡುವುದಾಗಿ ತಿಳಿಸಿದರು.

**ವಿಷಯ 7 : ರಾಜ್ಯ ಮಾಹಿತಿ ಆಯೋಗಕ್ಕೆ ಮಾಹಿತಿ ಹಕ್ಕು ನಿಯತಕಾಲಿಕೆಗಳನ್ನು ತರಿಸಿಕೊಳ್ಳುವ ಬಗ್ಗೆ :**

ಈ ಬಗ್ಗೆ ಸಭೆಗೆ ಮಾಹಿತಿ ನೀಡಿದ ಆಯೋಗದ ಕಾರ್ಯದರ್ಶಿಗಳು, ಈಗಾಗಲೇ ಸಂಬಂಧಪಟ್ಟ ನಿಯತಕಾಲಿಕೆಯ ಆರು ಪ್ರತಿಗಳನ್ನು ತರಿಸಿಕೊಳ್ಳಲು ಅಗತ್ಯವಿರುವ ಮೊತ್ತವನ್ನು ನಮೂದಿಸಿದ (ಪ್ರತಿ ನಿಯತಕಾಲಿಕೆಗೆ ರೂ.4,550/-) ಬಿಲ್ ತಯಾರಿಸಿ ಖಜಾನೆಗೆ ಸಲ್ಲಿಸಬೇಕಾಗಿದ್ದು, ಈ ಬಗ್ಗೆ ಖಜಾನೆ ಇಲಾಖೆಯಿಂದ ಹಣ ಡ್ರಾ ಮಾಡಲು Proforma Invoice ಪಡೆಯಲಾಗುತ್ತಿದ್ದು ನಂತರ ಹಣ ಡ್ರಾ ಮಾಡಿ ನಿಯತಕಾಲಿಕೆಗಳನ್ನು ತರಿಸಿಕೊಳ್ಳಲಾಗುವುದೆಂದು ಕಾರ್ಯದರ್ಶಿಗಳು ತಿಳಿಸಿದರು.

ನಂತರ ಮಾತನಾಡಿದ ಕಾನೂನು ಅಧಿಕಾರಿಯವರು All India Reporter ನಿಯತಕಾಲಿಕೆಯು 'Manupatra' ಅಂತರ್ಜಾಲದಲ್ಲಿ ಲಭ್ಯವಿರುವುದಾಗಿ ತಿಳಿಸಿದರು. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯವರು subscriber ಆಗಿದ್ದು ಸರ್ಕಾರದ ಇಲಾಖೆಗಳಿಗೆ ಇದರ ಸೌಲಭ್ಯವನ್ನು ಒದಗಿಸಿರುತ್ತಿರುತ್ತವೆ. ಈ ಸೌಲಭ್ಯವನ್ನು ಕರ್ನಾಟಕ ಮಾಹಿತಿ ಆಯೋಗಕ್ಕೂ ಒದಗಿಸುವಂತೆ ಸಿ.ಆ.ಸು ಇಲಾಖೆಗೆ ಪತ್ರ ಬರೆಯಬಹುದೆಂದು ಪ್ರಸ್ತಾಪಿಸಿದರು.

ನಿರ್ಣಯ : ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಮುಖ್ಯ ಮಾಹಿತಿ ಆಯುಕ್ತರು ಕಾರ್ಯದರ್ಶಿಯವರಿಗೆ ಸೂಚನೆ ನೀಡಿದರು..

**ವಿಷಯ 8: ಸಮಾಲೋಚನ ಸಭೆಗೆ ಆಯೋಗದ ಮಾಹಿತಿ ಒದಗಿಸುವುದು :**

ವಿಷಯ ಪ್ರಸ್ತಾಪಿಸಿದ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳು, ಸಿಆಸು.ಇಲಾಖೆ (ಆಡಳಿತ ಸುಧಾರಣೆ) ಇವರಿಂದ ಮಾನ್ಯ ಮುಖ್ಯಮಂತ್ರಿಗಳು ಕರೆದಿರುವ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳು, ಇಲಾಖಾ ಕಾರ್ಯದರ್ಶಿಗಳ ಸಭೆಗೆ ಮಾಹಿತಿ ಸಲ್ಲಿಸುವಂತೆ ಪತ್ರ ಬಂದಿದ್ದು, ಈ ಸಭೆಗೆ ಆಯೋಗದ ಮಾಹಿತಿಯನ್ನು ಅಂಕಿಅಂಶವಾರು ಒದಗಿಸಬೇಕಾಗಿದೆ ಎಂದು ಸಭೆಗೆ ತಿಳಿಸಲಾಗಿ, ಇದಕ್ಕೆ ಸ್ಪಂದಿಸಿದ ಮಾಹಿತಿ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಆಯೋಗದ ಬಗ್ಗೆ ಮಾಹಿತಿಯನ್ನು ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ, ಜನಸ್ಪಂದನ ಇವರು

ಹಾಜರಿದ್ದು ಒದಗಿಸುವುದರಿಂದ ಆಯೋಗದ ಪ್ರತಿನಿಧಿ ಹಾಜರಾಗುವ ಅವಶ್ಯಕತೆ ಇಲ್ಲವೆಂದು ತಿಳಿಸಲಾಯಿತು. 2011-12ರ ವಾರ್ಷಿಕ ವರದಿಯ ಪ್ರತಿಯನ್ನು ಆಯೋಗದಿಂದ ನೀಡಲು ಕ್ರಮಕೈಗೊಳ್ಳುವಂತೆ ಕಾರ್ಯದರ್ಶಿಯವರಿಗೆ ತಿಳಿಸಲಾಯಿತು.

**ನಿರ್ಣಯ: ಸಮಾಲೋಚನ ಸಭೆಗೆ ಅಗತ್ಯವಿರುವ ಮಾಹಿತಿ ಹಾಗೂ 2011-12ರ ವಾರ್ಷಿಕ ವರದಿಯ ಪ್ರತಿಯನ್ನು ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ ಇಲಾಖೆ ಒದಗಿಸುವುದು ಎಂದು ತೀರ್ಮಾನಿಸಲಾಯಿತು.**

**ವಿಷಯ 9 : ಕೇಂದ್ರ ಮಾಹಿತಿ ಆಯೋಗದ 8ನೇ ವಾರ್ಷಿಕ ಸಭೆಯಲ್ಲಿ ಪಾಲ್ಗೊಳ್ಳುವ ಬಗ್ಗೆ :**

ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಗಳು, ಕೇಂದ್ರ ಮಾಹಿತಿ ಆಯೋಗದಿಂದ ಈ ಬಗ್ಗೆ ಪತ್ರ ಬಂದಿದ್ದು, ಸೆಪ್ಟೆಂಬರ್ 2ನೇ ತಾರೀಖಿನಿಂದ ಎರಡು ದಿನಗಳ ಕಾಲ ನಡೆಯುವ 8ನೇ ವಾರ್ಷಿಕ ಸಭೆಯಲ್ಲಿ ಪಾಲ್ಗೊಳ್ಳುವ ಬಗ್ಗೆ ದೃಢೀಕರಿಸುವಂತೆ ತಿಳಿಸಿರುವುದಾಗಿ ಸಭೆಗೆ ತಿಳಿಸಿದರು. ಇದಕ್ಕೆ ಎಲ್ಲಾ ಮಾಹಿತಿ ಆಯುಕ್ತರುಗಳು ಪಾಲ್ಗೊಳ್ಳುವುದಾಗಿ ಮುಖ್ಯ ಆಯುಕ್ತರು ತೀರ್ಮಾನಿಸಿ, ಕಾರ್ಯದರ್ಶಿ ಹಾಗೂ ಕಾನೂನು ಅಧಿಕಾರಿಗಳು ಸಹ ಈ ವಾರ್ಷಿಕ ಸಭೆಯಲ್ಲಿ ಪಾಲ್ಗೊಳ್ಳುವಂತೆ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

**ನಿರ್ಣಯ : 8ನೇ ವಾರ್ಷಿಕ ಸಭೆಯಲ್ಲಿ ಎಲ್ಲಾ ಮಾಹಿತಿ ಆಯುಕ್ತರುಗಳು, ಕಾನೂನು ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಭಾಗವಹಿಸುವುದು. ಸೆಪ್ಟೆಂಬರ್ 1ನೇ ತಾರೀಖು, ಸಂಜೆ 4.30ರ ವಿಮಾನದಲ್ಲಿ ಹೊರಡುವುದು ಮತ್ತು ಅಗತ್ಯವಿರುವ ವಸತಿ ವ್ಯವಸ್ಥೆ, ಹಾಗೂ ವಾಹನ ವ್ಯವಸ್ಥೆಯನ್ನು ಕರ್ನಾಟಕ ಭವನದಲ್ಲಿ ಮಾಡಿಸಲು ಡಿ.ಆರ್.ಡಿ.ಓ ಪ್ರವೇಶಕ್ಕೆ ವಿಐಪಿ ಪಾಸ್ ಇತ್ಯಾದಿಗಳ ಬಗ್ಗೆ ಪತ್ರ ಬರೆಯಲು ಕಾರ್ಯದರ್ಶಿಗಳು ಕ್ರಮ ವಹಿಸುವುದು.**

**ವಿಷಯ 11 : ಕಾನೂನು ಗುಮಾಸ್ತ / ಸಂಶೋಧನಾ ಸಹಾಯಕರ ಹುದ್ದೆ :**

ಮಾಹಿತಿ ಆಯೋಗದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿರುವ ಪ್ರತಿಯೊಬ್ಬ ಲಾ ಇನ್‌ಟರ್ನ್‌ರವರಿಗೆ (i) ಸಂಭಾವನೆಯನ್ನು ರೂ.20,000ಕ್ಕೆ ನಿಗದಿಪಡಿಸುವ ಬಗ್ಗೆ, (ii) "ಲಾ ಇನ್‌ಟರ್ನ್ಸ್"ಎಂಬ ಪದದ ಬದಲಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇರುವ ರೀತಿ "Law clerks – cum – research assistants" ಎಂದು ಸರ್ಕಾರಿ ಆದೇಶವನ್ನು ಮಾರ್ಪಡಿಸಲು ಮತ್ತು (iii) "ಹೊರಗುತ್ತಿಗೆಯ ಆಧಾರದ ಮೇಲೆ ಮಾಸಿಕ ವೇತನ" ಪದಗಳನ್ನು ತೆಗೆದುಹಾಕಿ ಸೂಕ್ತ ರೀತಿಯಲ್ಲಿ ಹೊರಗುತ್ತಿಗೆಯ ಆಧಾರದಲ್ಲಾಗಲಿ ಅಥವಾ ನೇಮಕಾತಿ ಆಧಾರದಲ್ಲಾಗಲಿ ಅರ್ಜಿಗಳನ್ನು ಆಹ್ವಾನಿಸದೆ consultancy service ಆಧಾರದಲ್ಲಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಕ್ರಮಕ್ಕೆ ಮಂಜೂರಾತಿ ನೀಡುವಂತೆ ಸರ್ಕಾರದ ಆದೇಶವನ್ನು ಮಾರ್ಪಡಿಸಲು ಸರ್ಕಾರವನ್ನು ಕೋರುವ ಬಗ್ಗೆ ಕಾನೂನು ಅಧಿಕಾರಿಯವರು ಪ್ರಸ್ತಾಪಿಸಿರುತ್ತಾರೆ.

ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು "Law clerks" ಎಂಬ ಪದವು ಸೂಕ್ತವಾಗಿಲ್ಲವೆಂದು ತಿಳಿಸಿರುತ್ತಾರೆ.

**ನಿರ್ಣಯ: ಚರ್ಚೆಯ ನಂತರ, ಸೂಕ್ತ ರೀತಿಯಲ್ಲಿ ನಾಮಕಾರಣ ಮಾರ್ಪಡಿಸಿ, ಅಗತ್ಯ ತಿದ್ದುಪಡಿ ಪಡೆದು, ಸೂಕ್ತ ಅಂಶಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇರುವಂತೆ ಸೇರ್ಪಡಿಸಿ ನೀಡುವಂತೆ ಕಾನೂನು ಅಧಿಕಾರಿಗಳನ್ನು ಕೋರಿ ನಂತರ ಈ ಹುದ್ದೆಗಳನ್ನು ಸೂಕ್ತ ನಿಯಮದನ್ವಯ ಭರ್ತಿ ಮಾಡಲು ಶೀಘ್ರ ಕ್ರಮಕೈಗೊಳ್ಳುವಂತೆ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.**

**ವಿಷಯ 12 : ಕಾಯ್ದೆಯ ಸೆಕ್ಷನ್ 20 (1) ಮತ್ತು 20 (2) ಬಗ್ಗೆ :**

ಮಾಹಿತಿ ಹಕ್ಕು ಕಾಯಿದೆಯ ಕಲಂ 20(1) ಮತ್ತು 20(2)ರ ಬಗ್ಗೆ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಸಭೆಯನ್ನು ಉದ್ದೇಶಿಸಿ ಹೇಳುತ್ತಾ ಆಯೋಗದಲ್ಲಿ ದಾಖಲು ಮಾಡಿರುವ ಪ್ರಕರಣಗಳಲ್ಲಿ ಅರ್ಜಿದಾರರು ಕೆಲವೊಮ್ಮೆ ಸಂಬಂಧಪಡದಂತಹ ಕಲಂಗಳುಳ್ಳ ನಮೂನೆಗಳನ್ನು ಉಪಯೋಗಿಸುತ್ತಾರೆ ಉದಾ: ದೂರನ್ನು ದಾಖಲು ಮಾಡುವಾಗ ಕಲಂ 18(1) ನಮೂದಿಸಲ್ಪಟ್ಟ ನಮೂನೆಯ ಬದಲು ಕಲಂ 19(1) ಅಥವಾ 19(3) ಎಂದು ನಮೂದಿಸಿರುವ ನಮೂನೆಗಳನ್ನು ಉಪಯೋಗಿಸುತ್ತಿರುತ್ತಾರೆ. ಇದಕ್ಕೆ ಸ್ಪಂದಿಸಿದ, ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು, ಕಾಯಿದೆ ಅಡಿ ಯಾವುದೆ ನಮೂನೆಗಳನ್ನು ನಿಗದಿಪಡಿಸಿಲ್ಲದ ಕಾರಣ, ಆಯೋಗದ ಮುಂದೆ ದಾಖಲು ಮಾಡಿರುವಂತಹ ಪ್ರಕರಣದ ಅರ್ಜಿಯಲ್ಲಿ ನಮೂದಿಸಿರುವಂತಹ ಕಲಂ ತಪ್ಪಾಗಿದ್ದಲ್ಲಿ ಅದಕ್ಕೆ ಲಕ್ಷ್ಯ ಕೊಡದೆ, ದಾಖಲಿಸಿರುವ ಪ್ರಕರಣವು ದೂರು ಆಗಿದ್ದಲ್ಲಿ, ಅದನ್ನು ಮಾಹಿತಿ ಹಕ್ಕು ಕಾಯ್ದೆಯ ವಿಧಿ 18(1)ರಡಿ ದಾಖಲಿಸಿರುವ ದೂರೆಂದು ಪರಿಗಣಿಸಬಹುದೆಂದು ಮತ್ತು ದಾಖಲಿಸಿರುವ ಪ್ರಕರಣವು ಎರಡನೇ ಮೇಲ್ಮನವಿಯಾಗಿದ್ದಲ್ಲಿ, ಅದನ್ನು ಕಲಂ 19(3)ರಡಿ ದಾಖಲಿಸಿರುವ ಎರಡನೆ ಮೇಲ್ಮನವಿಯೆಂದು ಪರಿಗಣಿಸಬಹುದೆಂದು ತಿಳಿಸಿದರು.

ಮುಂದುವರೆದು, ವಿಚಾರಣೆ ಹಂತದಲ್ಲಿ ದಾಖಲಿಸಿರುವ ಎರಡನೇ ಮೇಲ್ಮನವಿಯು 200 ದಿನಗಳಿಗೂ ಹೆಚ್ಚಿನ ವಿಳಂಬವಾಗಿದ್ದರೆ, ಅರ್ಜಿದಾರನು ವಿಳಂಬದ ಮನ್ನಾಕ್ಕೆ ಸರಿಯಾದ ಕಾರಣವನ್ನು ನೀಡಿಲ್ಲವೆಂದು ತಿಳಿಸಿ ಪ್ರಕರಣ ನಿರ್ವಹಿಸಲು ಅರ್ಹವಲ್ಲವೆಂದು ವಿಲೇ ಮಾಡಬಹುದು ಎಂದು ಹೇಳಿದರು.

ಅರ್ಜಿದಾರರಿಂದ ದೂರನ್ನು ಸ್ವೀಕರಿಸಬಹುದೆಂದು ಮಾಹಿತಿ ಹಕ್ಕು ಕಾಯಿದೆಯ ಕಲಂ 18(1)ರಡಿ ತಿಳಿಸಿರುತ್ತದೆ ಹಾಗೂ ದೂರಿನ ಜುಲ್ಮಾನೆಯನ್ನು ಸಹ ಹಾಕಬಹುದೆಂದು ಮಾಹಿತಿ ಹಕ್ಕು ಕಾಯಿದೆಯ ಕಲಂ 20(1)ರಡಿ ತಿಳಿಸಲಾಗಿರುತ್ತದೆ. ಸರ್ವೋಚ್ಛ ನ್ಯಾಯಾಲಯವು ಸಹ ತನ್ನ ಸಿವಿಲ್ ಅಪೀಲ್ ನಂ.10787-10788/2011ರ ತೀರ್ಪಿನಲ್ಲಿ ಮಾಹಿತಿ ಹಕ್ಕು ಕಾಯಿದೆಯ ಕಲಂ 18(1)ರಡಿ ದೂರನ್ನು ಸ್ವೀಕರಿಸಬಹುದೆಂದು ತಿಳಿಸಿರುತ್ತದೆ. ಆದರೆ, ಕರ್ನಾಟಕ ಉಚ್ಚ ನ್ಯಾಯಾಲಯದ WP.19441/2012 ರಲ್ಲಿ ಮಾಹಿತಿ ಹಕ್ಕು ಕಾಯಿದೆಯ ಕಲಂ 18(1)ರಡಿ ದೂರನ್ನು ಸ್ವೀಕರಿಸುವುದು ಕಾನೂನುಬಾಹಿರವೆಂದು ತಿಳಿಸಿರುತ್ತದೆ ಎಂದು ಆಯುಕ್ತರಾದ ಶ್ರೀ ರಾಮನಾಯಕ್‌ರವರು ಪ್ರಸ್ತಾಪಿಸಿದರು. ಕಾನೂನು ಅಧಿಕಾರಿಯವರು ಮಾತನಾಡಿ ಕರ್ನಾಟಕ ಉಚ್ಚ ನ್ಯಾಯಾಲಯದ WP. 19441/2012 ರಲ್ಲಿ 're-spoken' ಕೋರಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು. ಆದರೆ, ಆಯುಕ್ತರಾದ ಶ್ರೀ ಡಿ.ತಂಗರಾಜ್ ರವರು ಹಾಗೂ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಸರ್ವೋಚ್ಛ ನ್ಯಾಯಾಲಯದ ತೀರ್ಪು ಅಂತಿಮವಾಗಿದ್ದು ಈಗಾಗಲೇ ಪಾಲಿಸಿಕೊಂಡು ಬರುತ್ತಿರುವುದಾಗಿ, ಅದನ್ನೇ ಪಾಲಿಸಿಕೊಂಡು ಹೋಗಲಾಗುವುದೆಂದು re-spoken ಕೋರಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟರು.

ನಿರ್ಣಯ: 're-spoken' ಅರ್ಜಿ ಸಲ್ಲುಸುವ ಅಗತ್ಯವಿಲ್ಲವೆಂದು ನಿರ್ಣಯಿಸಲಾಯಿತು.

ಮೇಲ್ಕಂಡ ಚರ್ಚೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಮುಖ್ಯ ಮಾಹಿತಿ ಆಯುಕ್ತರು,

ಪ್ರತಿಯನ್ನು:

1. ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತ ಮುಖ್ಯ ಮಾಹಿತಿ ಆಯುಕ್ತರ ಗಮನಕ್ಕೆ ತರಲು ಸಲ್ಲಿಸಿದೆ.
2. ಎಲ್ಲಾ ರಾಜ್ಯ ಮಾಹಿತಿ ಆಯುಕ್ತರಗಳ ಆಪ್ತ ಸಹಾಕಯವರಿಗೆ ಕಳುಹಿಸುತ್ತ ಮಾಹಿತಿ ಆಯುಕ್ತರ ಗಮನಕ್ಕೆ ತರಲು ಸಲ್ಲಿಸಿದೆ. ರವರು, ಕಮಾಆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ (ಜನಸ್ಪಂದನ ಇಲಾಖೆ) ವಿ.ವಿ ಟವರ್ಸ್, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಇ-ಆಡಳಿತ ಇಲಾಖೆ, 2ನೇ ಹಂತ ಬಹುಮಹಡಿಗಳ ಕಟ್ಟಡ, ಬೆಂಗಳೂರು. ಸ
6. ಕಾರ್ಯದರ್ಶಿಯವರ ಆಪ್ತಶಾಖೆಗೆ/ಕಾನೂನು ಅಧಿಕಾರಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು/ ಸಂಯೋಜನಾಧಿಕಾರಿಗಳು, ಎನ್.ಐ.ಸಿ. ಕಮಾಆ, ಬೆಂಗಳೂರು.
7. ಶ್ರೀ ಶ್ರೀನಿವಾಸ್, ಎ.ಎಸ್.ಓ., ಕಮಾಆ, ಬೆಂಗಳೂರು.
8. ಕಛೇರಿ ಪ್ರತಿ.